ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE

# ಇಂದಿನಿಂದ ಅಧಿವೇಶನ ಕದನ



ವಿಜಯವಾಣಿ ಚಿತ್ರ

**ಬೆಂಗಳೂರು:** ಸಂಸತ್‌ನ ಮುಂಗಾರು ಅಧಿವೇಶನ ಕರೊನಾ ಕಾರಣಕ್ಕೆ ಮೊಟಕುಗೊಳ್ಳುವ ಸಾಧ್ಯತೆ ಗೋಚರಿಸಿರುವ ನಡುವೆಯೇ ಸೋಮವಾರ ರಾಜ್ಯ ವಿಧಾನಮಂಡಲದ ಮುಂಗಾರು ಅಧಿವೇಶನ ಆರಂಭವಾಗುತ್ತಿದೆ. ಸುಗ್ರೀವಾಜ್ಞೆ ತಂದಂತಹ ಮಹತ್ವದ ತೀರ್ಮಾನಗಳಿಗೆ ಶಾಸನ ಸಭೆಯ ಒಪ್ಪಿಗೆ ಪಡೆಯುವ ಧಾವಂತದಲ್ಲಿ ಸರ್ಕಾರವಿದ್ದರೆ, ವ್ಯವಸ್ಥಿತವಾಗಿ ಸರ್ಕಾರವನ್ನು ಹಣಿಯಲು ಪ್ರತಿಪಕ್ಷ ಕಾಂಗ್ರೆಸ್ ಸರ್ವ ರೀತಿಯಲ್ಲಿ ಸಜ್ಜಾಗಿದೆ. ಆದರೆ, ಕಲಾಪವನ್ನು ಕರೊನಾ ಆಪೋಶನ ತೆಗೆದುಕೊಳ್ಳುವ ಆತಂಕವೂ ಕಾಡುತ್ತಿದೆ. ● ವಿವರ ಪುಟ 7

### ಸುಗ್ರೀವಾಜ್ಞೆಗಳಿಗೆ ಒಪ್ಪಿಗೆ ಪಡೆಯಲು ಬಿಜೆಪಿಗರ ಧಾವಂತ | ಸರ್ಕಾರವನ್ನು ಹಣಿಯಲು ಪ್ರತಿಪಕ್ಷಗಳ ತಂತ್ರ

# ಇಂದಿನಿಂದ ಮುಂಗಾರು ಅಧಿವೇಶನ, ಕಾವೇರಲಿದೆ ಸದನ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕರೊನಾ ಆತಂಕದ ನಡುವೆ ಸೋಮವಾರದಿಂದ ವಿಧಾನ ಮಂಡಲದ ಮುಂಗಾರು ಅಧಿವೇಶನ ಆರಂಭವಾಗುತ್ತಿದೆ. ಸುಗ್ರೀವಾಜ್ಞೆ ತಂದಂತಹ ಮಹತ್ವದ ತೀರ್ಮಾನಗಳಿಗೆ ಹೇಗಾದರೂ ಶಾಸನ ಸಭೆಯ ಒಪ್ಪಿಗ ಪಡೆಯುವ ಧಾವಂತದಲ್ಲಿ ಸರ್ಕಾರವಿದ್ದರೆ, ವ್ಯವಸ್ಥಿತವಾಗಿ ಸರ್ಕಾರವನ್ನು ಹಣಿಯಲು ಪ್ರತಿಪಕ್ಷ ಕಾಂಗ್ರೆಸ್ ಸರ್ವ ರೀತಿಯಲ್ಲಿ ಸಜ್ಜಾಗಿದೆ. ಆದರೆ, ಕರೊನಾ ಕಲಾಪವನ್ನು ಆಪೋಶನ ತೆಗೆದುಕೊಳ್ಳುವ ಆತಂಕವೂ ಕಾಡುತ್ತಿದೆ.

ಅಧಿವೇಶನದಲ್ಲಿ ಪಾಲ್ಗೊಳ್ಳುವ ಮಂತ್ರಿಗಳು, ಶಾಸಕರು, ಅಧಿಕಾರಿಗಳು, ಸಿಬ್ಬಂದಿ, ಭದ್ರತಾ ಸಿಬ್ಬಂದಿ, ಮಾಧ್ಯಮದವರಿಗೆ ಕರೊನಾ ಟೆಸ್ಟ್ ಕಡ್ಡಾಯ ಮಾಡಿದ್ದು, ಟೆಸ್ಟ್ ಮಾಡಿಸಿಕೊಂಡ 1800 ಜನರಲ್ಲಿ 70 ಜನರಿಗೆ ಸೋಂಕು ತಗುಲಿದೆ. ಅಲ್ಲದೆ ರಾಜ್ಯದಲ್ಲಿ ಸೋಂಕು ದಿನದಿಂದ ದಿನಕ್ಕೆ ವ್ಯಾಪಕವಾಗುತ್ತಲೇ ಇರುವ ಕಾರಣ ಮೂರು ದಿನದಲ್ಲೇ ಕಲಾಪ ಮುಗಿಸಬೇಕೆಂಬ ಚಿಂತನೆಯೂ ನಡೆದಿದ್ದು, ಸೋಮವಾರ ನಡೆಯುವ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ನಿರ್ಧಾರವಾಗಲಿದೆ.



ವಿಜಯವಾಣಿ ಚಿತ್ರ

ಅಧಿವೇಶನ ಸಿದ್ಧತೆಯಲ್ಲಿ ಸಿಬ್ಬಂದಿ

ಕರೊನಾ ನೆಪದಲ್ಲಿ ಮೂರು ದಿನದಲ್ಲಿ ಕಲಾಪವನ್ನು ಮುಗಿಸಲು ನಾವು ಸಿದ್ಧವಿಲ್ಲ ಎಂದು ಕಾಂಗ್ರೆಸ್ ಸ್ಪಷ್ಟವಾಗಿ ಹೇಳಿದೆ. ಕಲಾಪದ ಆರಂಭದ ದಿನಗಳಲ್ಲೇ ವಿಧೇಯಕಗಳನ್ನು ಮಂಡಿಸಲು ಹೊರಟಿರುವ ಸರ್ಕಾರ, ಪ್ರಮುಖ ವಿಧೇಯಕದ ಬಗ್ಗೆ ಗಮನಹರಿಸಿದೆ. ಭೂ ಸುಧಾರಣೆ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆಗೆ ಹೇಗಾದರೂ ಒಪ್ಪಿಗೆ ಪಡೆದುಕೊಳ್ಳಬೇಕೆಂದು ಅ ಬಗ್ಗೆಯೇ ಗಮನ ಹರಿಸಿದೆ. ಕಾಂಗ್ರೆಸ್, ಜೆಡಿಎಸ್ ವಿಧೇಯಕಗಳನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲ.

## ಮೂರು ಪಕ್ಷಗಳ ತಯಾರಿ

**1** ಕರೊನಾ, ನೆರೆ ಪರಿಹಾರ, ಡ್ರಗ್ಸ್ ದಂಧೆ, ಡಿ.ಜೆ.ಹಳ್ಳಿ ಪ್ರಕರಣದ ಜತೆ, ಪ್ರಮುಖ ವಿಧೇಯಕಗಳ ಕುರಿತು ಕಾಂಗ್ರೆಸ್ ಒಂದಷ್ಟು ತಯಾರಿ ಮಾಡಿಕೊಂಡಿದ್ದು, ಆಡಿಗಡಿಗೆ ಸರ್ಕಾರವನ್ನು ಎಡವಿ ಬೀಳುವಂತೆ ಮಾಡಲು ತಂತ್ರ ರೂಪಿಸಿದೆ.

**2** ಭೂ ಸುಧಾರಣೆ ಕಾಯ್ದೆ, ಎಪಿಎಂಸಿ ಕಾಯ್ದೆ ಸೇರಿ ಸುಗ್ರೀವಾಜ್ಞೆಗಳ ವಿರುದ್ಧ ದನಿ ಎತ್ತುವುದಕ್ಕೆ ಜೆಡಿಎಸ್ ತಯಾರಿ ನಡೆಸಿದೆ.

**3** ಇತ್ತ ಬಿಜೆಪಿ ಪ್ರತಿಪಕ್ಷ ಟೀಕೆಗಳನ್ನು ಹಿಮ್ಮೆಟ್ಟಿಸಲು ಅಗತ್ಯ ಸರಕುಗಳನ್ನೂ ಸಿದ್ಧಮಾಡಿಕೊಂಡಿದೆ. ಗದ್ದಲ ನಡೆದರೆ ಪ್ರಮುಖ ವಿಧೇಯಕಗಳಿಗೆ ಒಪ್ಪಿಗೆ ಪಡೆದುಕೊಳ್ಳಲು ನಿರ್ಧರಿಸಿದೆ.

**ಸಿಎಂ ಕರೆ ಮಾಡಿದ್ದು ತಪ್ಪು:** ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನನಗೆ ಹಾಗೂ ಪ್ರತಿಪಕ್ಷ ನಾಯಕರಿಗೆ ದೂರವಾಣಿ ಕರೆ ಮಾಡಿದ್ದರು. ಕರೊನಾ ಆರ್ಭಟ ಹಿನ್ನೆಲೆ ಸದನದವನ್ನು 3 ದಿನಕ್ಕೆ ಮೊಟಕು ಮಾಡುತ್ತಿದ್ದೇವೆ, ಸಹಕಾರ ಕೊಡಬೇಕು ಅಂತ ಕೇಳಿದರು. ಆದರೆ, ನಾವು ಕಲಾಪವನ್ನು ಮುಂಚಿತವಾಗಿ ಮಗಿಸಲು ಬಿಡಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

**ಇಂದಿನ ಕಾರ್ಯಕಲಾಪ:** ಸಿಎಜಿ ವರದಿ ಮಂಡನೆ, ಬಿಬಿಎಂಪಿ ವಿಧೇಯಕ ಕುರಿತು ಜಂಟಿ ಪರಿಶೀಲನಾ ಸಮಿತಿ ವರದಿ ಮಂಡನೆ, 10 ಸದನ ಸಮಿತಿಗಳಿಗೆ ಸದಸ್ಯರನ್ನು ನೇಮಿಸಲು ಪ್ರಸ್ತಾವ, 9 ವಿಧೇಯಕಗಳ ಮಂಡನೆ, 4 ವಿಧೇಯಕಗಳ ಪರ್ಯಾಲೋಚನೆ ಪ್ರಕ್ರಿಯೆ ನಡೆಸಬೇಕೆಂದು ವೇಳಾಪಟ್ಟಿ ಸಿದ್ಧವಾಗಿದೆ.

**ದೂರ ಉಳಿವವರು ಯಾರು?:** ಡಿಸಿಎಂ ಅಶ್ವತ್ಥನಾರಾಯಣ್, ಗೃಹ ಸಚಿವ ಬಸವರಾಜ ಬೊಮ್ಮಾಯಿ, ಆಹಾರ ಸಚಿವ ಕೆ.ಗೋಪಾಲಯ್ಯ ಅವರಿಗೆ ಕರೊನಾ ಸೋಂಕು ತಗುಲಿರುವ ಕಾರಣ ಕಲಾಪದಿಂದ ದೂರ ಉಳಿಯಲಿದ್ದಾರೆ. ಇವರನ್ನು ಹೊರತುಪಡಿಸಿ ಮೂವರು ಶಾಸಕರೂ ಕ್ವಾರಂಟೈನ್‌ನಲ್ಲಿದ್ದಾರೆ.



ಸಂಪೂರ್ಣ ಗೋಹತ್ಯೆ ನಿಷೇಧ, ಭಾರತೀಯ ಗೋತಳಿಗಳ ಸಂರಕ್ಷಣೆ, ಸಂವರ್ಧನೆಗೆ ಅನುವು ಮಾಡಿಕೊಡುವ ಮಸೂದೆಯನ್ನು ಅಧಿವೇಶನದಲ್ಲಿ ಅಂಗೀಕರಿಸಬೇಕು. ಬಹುಜನರ ಅಭಿಪ್ರಾಯಕ್ಕೆ ಸರ್ಕಾರ ಮನ್ನಣೆ ನೀಡಬೇಕು.

| ಶ್ರೀ ರಾಘವೇಶ್ವರ ಭಾರತಿ ಸ್ವಾಮೀಜಿ
ಶ್ರೀರಾಮಚಂದ್ರಾಪುರ ಮಠದ ಪೀಠಾಧಿಪತಿ